**CW : 7**

PW : 6

# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.229/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರವೀಣ್ ಡಿಸೋಜಾ |
| ತಂದೆಯ ಹೆಸರು | : | ಲೇಟ್ ಹ್ಯಾರಿ ಡಿಸೋಜಾ |
| ಪ್ರಾಯ | : | 58 ವರ್ಷ |
| ಉದ್ಯೋಗ | | ಪ್ರವೀಣ್ ಮೋಟಾರ್ ಡ್ರೈವಿಂಗ್ ಸ್ಕೂಲ್ನ ಮಾಲಿಕ |
| ವಾಸಸ್ಥಳ | : | ದರ್ಬೆ ಗ್ರಾಮ, ಪುತ್ತೂರು |

ದಿನಾಂಕ:**22.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-5 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ5 ಎ ಎಂದು ಗುರುತಿಸಲಾಯಿತು. ದಿ.18.05.2022 ರಂದು ನಾನು ಸಂಪ್ಯ ಪೋ. ಠಾಣೆಯಲ್ಲಿ ನಿಪಿ-5 ಕ್ಕೆ ಸಹಿ ಮಾಡಿದ್ದೇನೆ. ವಿಜಯಶೇಣವ ಎನ್ನುವವರಿಗೆ ಸೇರಿದ ವಾಹನವನ್ನು ನಾನು ಪೋ ಠಾಣೆಗೆ ಚಾಲನೆ ಮಾಡಿಕೊಂಡು ಹೋಗಿ ಕೊಟ್ಟ ಬಗ್ಗೆ ನಿಪಿ-5 ಮಹಜರು ಮಾಡಲಾಗಿದೆ. ನಾನು ಚಾಲನೆ ಮಾಡಿಕೊಂಡು ಹೋಗಿದ್ದ ವಾಹನ ವೆನ್ಯೂ ಆಗಿದ್ದು ಕಪ್ಪು ಬಣ್ಣದ್ದಾಗಿತ್ತು. ನನ್ನ ಸಮಕ್ಷಮ ಮಹಜರಿಗೆ ವಾಹನದ ಮಾಲಿಕರು ಸಹಿ ಮಾಡಿದರು. ಅವರ ಹೆಸರು ನನಗೆ ಸರಿಯಾಗಿ ನೆನಪಿಲ್ಲ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-6 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6ಎ ಎಂದು ಗುರುತಿಸಲಾಯಿತು. ನಾನು ಸಂಪ್ಯ ಪೋ. ಠಾಣೆಯಲ್ಲಿ ನಿಪಿ-6 ಕ್ಕೆ ದಿ.13.09.2022 ರಂದು ಸಹಿ ಮಾಡಿದ್ದೇನೆ. ಆ ದಿನ ನಾನು ವಿಜಯಶೇಣವ ಎನ್ನುವವರಿಗೆ ಸೇರಿದ ಕಾರನ್ನು ನಾನು ತೆಗೆದುಕೊಂಡು ಬಂದೆನು. ಕಾರಿನ ಭಾವಚಿತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ-4 ರಲ್ಲಿ ಕಾಣುವ ಕಾರಿನ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

**CW : 7**

PW : 6

**(ಈ ಹಂತದಲ್ಲ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ನಿಪಿ- **6** ಮಹಜರ್ ನಂತೆ ಕೃತಿ ಗಣೇಶ್ ಎನ್ನುವವರಿಗೆ ವಾಹನವನ್ನು ಪೋಲೀಸರು ಬಿಡುಗಡೆಗೊಳಿಸಿದಐರೆದದಿರ

ಸರಿ.

ಪಾಟೀ ಸವಾಲುಃಆರೋಪಿತರ ಪರ ಶ್ರೀ ಎಮ್ ಪಿ ಕೆ ವಕೀಲರಿಂದಃ

ವಾಹನವನ್ನು ಹಾಜರುಪಡಿಸುವಂತೆ ಪೊಲೀಸರು ನನಗೆ ನೋಟೀಸ್ ಕೊಟ್ಟಿಲ್ಲ. ಪೋ.ಠಾಣೆ ತಲುಪಿದಾಗ ಮದ್ಯಾಹ್ನ 1.00 ಗಂಟೆ ಆಗಿರಬಹುದು. ನಾನು ಸುಮಾರು ಅರ್ಧ ಗಂಟೆ ಠಾಣೆಯಲ್ಲಿದ್ದೆನು. ತಯಾರಾಗಿದ್ದ ದಾಖಲೆಗೆ ನಾನ ಸಹಿ ಮಾಡಿ ವಾಪಸ್ಸು ಬಂದಿದ್ದೇನೆ. ಆ ದಾಖಲೆಯಲ್ಲಿ ಏನೆಲ್ಲಾ ನಮೂದು ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ.

2 ನೇ ಬಾರಿ ನಾನು ಪೋ.ಠಾಣೆಗೆ ಹೋದಾಗ ಮದ್ಯಾಹ್ನ 2.00 ರಿಂದ 3.00 ಗಂಟೆ ಆಗಿರಬಹುದು. ಮಹಜರಿನಲ್ಲಿ ಆಗ ಕೂಡಾ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ವಾಹನವನ್ನು ನಾನು ಚಲಾಯಿಸಿಕೊಂಡು ಪೋ.ಠಾಣೆಗೆ ಹೋಗಿದ್ದು ಮತ್ತು ಪೋ.ಠಾಣೆಯಿಂದ ವಾಹನವನ್ನು ಚಲಾಯಿಸಿಕೊಂಡು ಬಂದಿದ್ದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ನನಗೆ ಡ್ರೈವಿಂಗ್ ಸ್ಕೂಲ್ ಉಂಟು. ಆದಕಾರಣ ಪೊಲೀಸರು ನನಗೆ ಚೆನ್ನಾಗಿ ಪರಿಚಯವಿದ್ದು ಅವರ ಕೋರಿಕೆಯಂತೆ ಮಹಜರುಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 7**

PW : 6